ಟೆಂಡರ್‌ನ್ನು ಆಹ್ವಾನಿಸಿ ದರಗುತ್ತಿಗೆ ನಿಗಧಿಪಡಿಸಿ, ರಾಜ್ಯದ ಆರೋಗ್ಯ ಸಂಸ್ಥೆಗಳ ಬೇಡಿಕೆಗನುಗುಣವಾಗಿ ಔಷಧಿಗಳನ್ನು ಖರೀದಿ ಮಾಡಲಾಗುವುದು

ಇ) ಕೆಲವು ಹಂತದ ಆಸ್ಪತ್ರೆಗಳಲ್ಲಿ ಅನುದಾನದ ಕೊರತೆಯಿಂದಾಗಿ ಔಷಧ ಪೂರೈಕೆಯ ಕೊರತೆ ಇರುವ ಅಂಶವನ್ನು ಮನಗಂಡು 2006–07 ನೇ ಸಾಲಿನಿಂದ ಅಂತಹ ಆಸ್ಪತ್ರೆಗಳಿಗೆ ಅನುದಾನವನ್ನು ಹೆಚ್ಚಿಸಿಕೊಳ್ಳಲಾಗಿದ್ದು, ಹೆಚ್ಚಳಗೊಂಡಿರುವ ಅನುದಾನದಿಂದ ಔಷಧಿ, ರಾಸಾಯನಿಕ ಮತ್ತು ಇತರೆ ವಸ್ತುಗಳನ್ನು ಖರೀದಿಸಿ ಪೂರೈಸಲಾಗುತ್ತಿದೆ

655 (470) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪಶುಸಂಗೋಪನಾ ಆಸ್ಪತ್ರೆಗಳೆಷ್ಟು?

ಆ) ಪಶುಸಂಗೋಪನಾ ಆಸ್ಪತ್ರೆಗಳಲ್ಲಿ ಕೊರತೆ ಇರುವ ವೈದ್ಯರ ಸಂಖ್ಯೆ ಎಷ್ಟು?

ಇ) ಪಶುಸಂಗೋಪನಾ ಆಸ್ಪತ್ರೆಯನ್ನು ಆಧುನೀಕರಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ರೇವು ನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆಯಲ್ಲಿ 3878 ವಿವಿಧ ಪಶುವೈದ್ಯ ಸಂಸ್ಥೆಗಳಿದ್ದು, ಅವುಗಳಲ್ಲಿ ಪಶು ಆಸ್ಪತ್ರೆಗಳ ಸಂಖ್ಯೆ 295

ಆ) ಈ ಪಶು ಆಸ್ಪತ್ರೆ ಮತ್ತು ಪಶು ಚಿಕಿತ್ಸಾಲಯಗಳಲ್ಲಿ 58 ಸಹಾಯಕ ನಿರ್ದೇಶಕ ಮತ್ತು 824 ಪಶುವೈದ್ಯಾಧಿಕಾರಿಗಳ ಕೊರತೆ ಇದೆ

ಇ) (1) ಪಶು ಸಂಗೋಪನಾ ಆಸ್ಪತ್ರೆಯನ್ನು ಆಧುನೀಕರಿಸಲು ಕಟ್ಟಡ ಇಲ್ಲದ ಸ್ಥಳಗಳಲ್ಲಿ ಕಟ್ಟಡ ನಿರ್ಮಾಣ ಈ ದಿಸೆಯಲ್ಲಿ RIDF Trench XI ಮತ್ತು XII ರಲ್ಲಿ 321 ಪಶುವೈದ್ಯ ಸಂಸ್ಥೆಗಳ ಕಟ್ಟಡಗಳು ನಿರ್ಮಾಣ ಮಾಡಲು ಮಂಜೂರಾತಿ ದೊರಕಿದ್ದು RIDF XI ರ 171 ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ

(2) ಶಿಥಿಲೀಕರಣ ಯಂತ್ರಗಳನ್ನೊಳಗೊಂಡಂತೆ ಇತರೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಎಲ್ಲಾ ತಾಲ್ಲೂಕುಗಳಲ್ಲಿ ಮಟ್ಟದ ಪ್ರಯೋಗ

ಶಾಲೆ ಸ್ಥಾಪನೆ ಮಾಡಿ ರೋಗ ತಪಾಸಣೆ/ನಿರ್ಣಯವನ್ನು ತ್ವರಿತಗೊಳಿಸಿ ಸೂಕ್ತ ಚಿಕಿತ್ಸೆ ನೀಡುವುದು

(3) ಈ ದಿಸೆಯಲ್ಲಿ ಈಗಾಗಲೇ 120 ತಾಲ್ಲೂಕು ಆಸ್ಪತ್ರೆಗಳಿಗೆ ಪ್ರಾಣಿರೋಗ, ಪ್ರಯೋಗ ಶಾಲೆ ಸ್ಥಾಪನೆಗೆ ಮೂಲಭೂತ ಸೌಲಭ್ಯ ಒದಗಿಸಲು ಕ್ರಮ ವಹಿಸಿದೆ ಎಲ್ಲಾ ಪ್ರಾಥಮಿಕ ಪಶು ಚಿಕಿತ್ಸಾ ಕೇಂದ್ರಗಳು ಮತ್ತು ಕೃತಕ ಗರ್ಭಧಾರಣ ಕೇಂದ್ರಗಳನ್ನು ಹಂತ ಹಂತವಾಗಿ ಉನ್ನತೀಕರಿಸಿ ಗುಣಮಟ್ಟದ ತಜ್ಞ ವೈದ್ಯರಿಂದ ಜಾನುವಾರುಗಳಿಗೆ ಚಿಕಿತ್ಸೆ ದೊರಕಲು ಕ್ರಮವಹಿಸಿದೆ

656 (471) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವೈದ್ಯಕೀಯ ಕಾಲೇಜುಗಳೆಷ್ಟು?

ಆ) ಔಷಧಿಗಳ ಬೆಲೆ ಹೆಚ್ಚಾಗುತ್ತಿದ್ದಲ್ಲಿ ಬೆಲೆಯನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಕಲಬೆರಕೆ ಔಷಧಿಯನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮವೇನು?

ಡಾ ವಿ.ಎಸ್. ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು).

ಅ) 36

ಆ) ಔಷಧಿ ಬೆಲೆ ನಿಗದಿ ಪಡಿಸುವ ಅಧಿಕಾರವನ್ನು ಕೇಂದ್ರ ಸರ್ಕಾರವೇ ಹೊಂದಿರುತ್ತದೆ ಔಷಧ ಬೆಲೆ ನಿಯಂತ್ರಣ ಆದೇಶ 1995ನ್ನು ಅನುಷ್ಠಾನಗೊಳಿಸಲು ಕೇಂದ್ರ ಸರ್ಕಾರವು ರಾಷ್ಟ್ರೀಯ ಔಷಧಿ ಬೆಲೆ ನಿಗದಿ ಪಡಿಸುವ ಪ್ರಾಧಿಕಾರವನ್ನು ರಚಿಸಿದೆ ಪ್ರಾಧಿಕಾರವು ಕಾಲ ಕಾಲಕ್ಕೆ ಎಲ್ಲಾ ಅನುಸೂಚಿತ ಔಷಧಿಗಳ ಬೆಲೆ ನಿಗದಿಪಡಿಸಿ ಆದೇಶಗಳನ್ನು ಹೊರಡಿಸುತ್ತದೆ

ಇ) ಔಷಧಿ ಪರೀಕ್ಷಾ ಪ್ರಯೋಗಾಲಯವು ಔಷಧ ನಿಯಂತ್ರಣ ಅಧಿಕಾರಿಗಳು ವಿಶ್ಲೇಷಣೆಗೆ ಕಳುಹಿಸುವ ಔಷಧಿ ಮಾದರಿಗಳನ್ನು ವಿಶ್ಲೇಷಿಸಿ ವಿಶ್ಲೇಷಣಾ ವರದಿ ನೀಡುತ್ತಾರೆ ವರ್ಷಕ್ಕೆ ಸುಮಾರು 2,700ಕ್ಕೂ ಅಧಿಕ ಔಷಧಿಗಳನ್ನು ಪರೀಕ್ಷಿಸಲಾಗುತ್ತದೆ